# ಹೊಡಿಬಡಿ ಆಟ-2024

TATA IPL



ಶಿವಂ ದುಬೆ ಅವರನ್ನು ಈ ರೀತಿ ನೋಡುವುದು ಅದ್ಭುತವಾಗಿದೆ. ಅವರು ಆರ್‌ಸಿಬಿಯಲ್ಲಿದ್ದಾಗ ಹೀಗಿರಲಿಲ್ಲ. ಅವರು ತುಂಬಾ ನಾಚಿಕೆ ಸ್ವಭಾವದ ವ್ಯಕ್ತಿ, ಕಷ್ಟಪಟ್ಟು ಕೆಲಸ ಮಾಡುತ್ತಿದ್ದರು. ಆದರೂ, ಯಶಸ್ಸು ಕಾಣಲು ಸಾಧ್ಯವಾಗಿರಲಿಲ್ಲ. ಅಲ್ಲಿ ಅವರು ಸ್ವಲ್ಪ ಕಲಿತಿದ್ದರು. ಆದರೆ ಮುಕ್ತವಾಗಿರಲು ಸಾಧ್ಯವಾಗಿರಲಿಲ್ಲ ಇದೀಗ ಅವರು ಸಿಎಸ್‌ಕೆ ತಂಡದಲ್ಲಿ ಮುಕ್ತವಾಗಿದ್ದು, ಎಂಎಸ್ ಧೋನಿ, ಸ್ಟೀಫನ್ ಫ್ಲೆಮಿಂಗ್ ಮತ್ತು ಹಿಂದಿನ ಎಲ್ಲಾ ವ್ಯಕ್ತಿಗಳು ಸ್ಥಾಪಿಸಿದ ಮ್ಯಾಜಿಕ್‌ನ ಪ್ರಭಾವ ಇದಾಗಿದೆ.
-ಎಬಿ ಡಿ. ವಿಲಿಯರ್ಸ್, ಮಾಜಿ ಕ್ರಿಕೆಟಿಗ

ಇಂದಿನ ಪಂದ್ಯ: ರಾಜಸ್ಥಾನ್ ರಾಯಲ್ಸ್ VS ಡೆಲ್ಲಿ ಕ್ಯಾಪಿಟಲ್ಸ್ | ಸಮಯ 7.30PM

## ಹಾಲ್ ಆಫ್ ಫೇಮ್



ಬುಧವಾರ ನಡೆದ ಮುಂಬೈ ಹಾಗೂ ಹೈದ್ರಾಬಾದ್ ಪಂದ್ಯ ಆಡಿದ ಬಳಿಕ ರೋಹಿತ್ ಶರ್ಮ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದ ಪರ 200ನೇ ಪಂದ್ಯ ಆಡಿದ ಮೊದಲ ಆಟಗಾರ ಎನಿಸಿಕೊಂಡಿದ್ದಾರೆ. ರೋಹಿತ್ ಶರ್ಮ 2011 ರಿಂದ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ಪರ ಆಡುತ್ತಿದ್ದಾರೆ. ಈ ತಂಡದ ಪರ ಇದುವರೆಗೆ 199 ಪಂದ್ಯ ಆಡಿದ್ದ ರೋಹಿತ್‌ಗೆ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧ ನಡೆದ ಪಂದ್ಯ 200ನೇ ಪಂದ್ಯವಾಗಿದೆ

## ಪರ್ಪಲ್ ಕ್ಯಾಪ್



6 ವಿಕೆಟ್
ಮುಸ್ತಫಿಜೂರ್ ರೆಹಮಾನ್

## ಆರೆಂಜ್ ಕ್ಯಾಪ್



143 ರನ್
ಹೆನ್‌ರಿಚ್ ಕ್ಲಾಸೇನ್

## ಅಂಕ ಪಟ್ಟಿ

| ತಂಡ | ಪಂದ್ಯ | ಗೆಲುವು | ಸೋಲು | ಅಂಕ |
|---|---|---|---|---|
| ಸಿಎಸ್‌ಕೆ | 2 | 2 | 0 | 4 |
| ಆರ್‌ಆರ್ | 1 | 1 | 0 | 2 |
| ಎಸ್‌ಆರ್‌ಎಚ್ | 2 | 1 | 1 | 2 |
| ಕೆಕೆಆರ್ | 1 | 1 | 0 | 2 |
| ಪಂಜಾಬ್ | 2 | 1 | 1 | 2 |
| ಆರ್‌ಸಿಬಿ | 2 | 1 | 1 | 2 |
| ಗುಜರಾತ್ | 2 | 1 | 1 | 2 |
| ಡೆಲ್ಲಿ | 1 | 0 | 1 | 0 |
| ಮುಂಬಯಿ | 2 | 0 | 2 | 0 |
| ಲಖನೌ | 1 | 0 | 1 | 0 |

# ಹೈದ್ರಾಬಾದ್‌ಗೆ ದಾಖಲೆ ಗೆಲುವು

### ಒಂದೇ ಪಂದ್ಯದಲ್ಲಿ ಒಟ್ಟು 523 ರನ್ | ಆರ್‌ಸಿಬಿ ದಾಖಲೆ ಉಡೀಸ್

**ಹೈದ್ರಾಬಾದ್:** ಹೆನ್‌ರಿಚ್ ಕ್ಲಾಸೇನ್, ಅಭಿಶೇಕ್ ಶರ್ಮಾ ಸೇರಿ ಮೂರು ಬ್ಯಾಟರ್‌ಗಳ ಅಮೋಘ ಅರ್ಧಶತಕದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ದಾಖಲೆ ಬರೆದಿದ್ದಲ್ಲದೆ, ಟೂರ್ನಿಯಲ್ಲಿ ಮೊದಲ ಗೆಲುವು ಸಾಧಿಸಿದೆ. ಅಲ್ಲದೆ ನಿಗದಿತ ಓವರ್‌ನಲ್ಲಿ ಐಪಿಎಲ್‌ನಲ್ಲಿ ಅತ್ಯಧಿಕ ರನ್ ಬಾರಿಸಿದ ದಾಖಲೆ ಬರೆದಿದೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಎಸ್ ಆರ್‌ಎಚ್ ತಂಡ ಅಮೋಘ ಇನ್ನಿಂಗ್ಸ್‌ನೊಂದಿಗೆ ಬರೋಬ್ಬರಿ 3 ವಿಕೆಟ್ ಕಳೆದುಕೊಂಡು 277 ಗಳಿಸಿತು. ಇದನ್ನು ಬೆನ್ನಟ್ಟಿದ ಮುಂಬಯಿ ತಂಡ 6 ವಿಕೆಟ್ ಕಳೆದುಕೊಂಡು 248 ರನ್ ಗಳಿಸಿ 31 ರನ್‌ಗಳಿಂದ ಸೋಲೊಪ್ಪಿಕೊಂಡಿತು.

**ಮಿಂಚಿದ ಹೆಡ್, ಕ್ಲಾಸೇನ್, ಅಭಿಶೇಕ್**

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಎಸ್‌ಆರ್‌ಎಚ್ ಆಕ್ರಮಣಕಾರಿ ಆಟಕ್ಕೆ ಆರಂಭದಲ್ಲೇ ಮಣೆ ಹಾಕಿತು. ತಂಡ ಮೊದಲನೇ 4 ಓವರ್‌ಗಳಲ್ಲಿ 45 ರನ್ ಸಿಡಿಸಿ ಆರ್ಭಟಿಸಿತು. ಈ ವೇಳೆ ಮಯಾಂಕ್ ಔಟಾದರು. ಆದರೆ, ಎರಡನೇ ವಿಕೆಟ್‌ಗೆ ಅನುಭವಿ ಆಟಗಾರ ಟ್ರಾವಿಸ್ ಹೆಡ್ ಜೊತೆಗೂಡಿದ ಅಭಿಷೇಕ್ ಶರ್ಮ ಭರ್ಜರಿ ಜೊತೆಯಾಟದ ಕಾಣಿಕೆ ನೀಡಿದರು. ಈ ಜೋಡಿ ಮುಂಬಯಿ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಟ್ರಾವಿಸ್ ಹೆಡ್ ಕೇವಲ 24 ಎಸೆತಗಳಲ್ಲಿ 9 ಬೌಂಡರಿ, 3 ಸಿಕ್ಸರ್ ಸಹಾಯದಿಂದ 62 ರನ್ ಸಿಡಿಸಿ ಔಟಾದರು. ಅವರೊಂದಿಗೆ ಜತೆಗೂಡಿದ ಅಭಿಷೇಕ್ ಶರ್ಮಾ 23 ಎಸೆತಗಳಲ್ಲಿ 63 ರನ್ ಬಾರಿಸಿದರು. ಮಾಜಿ ನಾಯಕ ಏಡೆನ್ ಮಾರ್ಕ್ರಾಮ್ ಹಾಗೂ ಹೆನ್ರಿಚ್ ಕ್ಲಾಸೇನ್ ದಾಖಲೆ ಬರೆಯುವ ಇನ್ನಿಂಗ್ಸ್ ಆಡಿದರು. ಹೆನ್ರಿಚ್ ಕ್ಲಾಸೇನ್ 34 ಎಸೆತಗಳಲ್ಲಿ 80 ರನ್ ಬಾರಿಸಿದರು.

**ಬಿರುಸಿನ ಆಟವಾಡಿದ ಮುಂಬಯಿ**

ಮಹಾ ಗುರಿಯನ್ನು ಬೆನ್ನಟ್ಟಿದ ಮುಂಬಯಿ ತಂಡವೂ ಬಿರುಸಿನ ಬ್ಯಾಟಿಂಗ್ ಆಡಿತು. ಆರಂಭಿಕರಾಗಿ ಬಂದ ಕಿಶನ್ ಪ್ರಾರಂಭದಿಂದಲೂ ಆಕ್ರಮಣಕಾರಿ ಆಟ ಪ್ರದರ್ಶಿಸಿ 13 ಎಸೆತದಲ್ಲಿ 34 ರನ್ ಗಳಿಸಿದರು. ಅವರೊಂದಿಗೆ ಒಗ್ಗೂಡಿದ ರೋಹಿತ್ 26 ಗಳಿಸಿದರು. ಬಳಿಕ ಬಂದ ನಮನ 30 ರನ್ ಗಳಿಸಿದರು. ಆ ಬಳಿಕ ಕ್ರೀಜ್‌ನಲ್ಲಿ ಇದ್ದುಕೊಂಡು ಹಿಗ್ಗಾಮುಗ್ಗಾ ಬ್ಯಾಟ್ ಬಿಸಿದ ತಿಲಕ್ ವರ್ಮಾ ಗೆಲುವಿನ ವಿಶ್ವಾಸ ತೋರಿಸಿದರು. ಅವರು 34 ಎಸೆತದಲ್ಲಿ 64 ರನ್ ಗಳಿಸಿ ಔಟಾದರು. ಇದರೊಂದಿಗೆ ಪಂದ್ಯ ರೋಚಕ ಘಟ್ಟದಲ್ಲಿ ತಲುಪಿತ್ತು ಬಳಿಕ ಬಂದ ಟೀಮ್ ಡೆವಿಡ್ 42 ಗಳಿಸಿದರು. ನಾಯಕ ಹಾರ್ದಿಕ್ ಪಂಡ್ಯಾ 24 ಗಳಿಸಿದರೆ, ಕೊನೆಯಲ್ಲಿ ರೊಮಾರಿಯೋ 15 ಗಳಿಸಿದರು. ಕೊನೆಯಲ್ಲಿ ಮುಂಬಯಿ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 246 ರನ್ ಗಳಿಸಿತು.

**ಐತಿಹಾಸಿಕ ಪಂದ್ಯ**

ಎಸ್‌ಆರ್‌ಎಚ್ ದಾಖಲೆ ಜತೆಗೆ ಈ ಪಂದ್ಯ ಇನ್ನೊಂದು ದಾಖಲೆಗೆ ಸಾಕ್ಷಿಯಾಗಿದೆ. ಐಪಿಎಲ್ ಪಂದ್ಯ ಒಂದರಲ್ಲಿ 500ಕ್ಕೂ ಅಧಿಕ ಕಲೆಹಾಕಿದ್ದು, ನೋಡುಗರನ್ನು ರಂಜಿಸಿದೆ. ಐಪಿಎಲ್ ಈವರೆಗೂ 500ಕ್ಕೂ ಅಧಿಕ ರನ್ ಒಂದೇ ಪಂದ್ಯದಲ್ಲಿ ಬಂದಿರಲಿಲ್ಲ. ಬುಧವಾರ ನಡೆದ ಪಂದ್ಯದಲ್ಲಿ ಮೊದಲ ಇನ್ನಿಂಗ್ಸ್‌ನಲ್ಲಿ 277 ಹಾಗೂ ಎರಡನೇ ಇನ್ನಿಂಗ್ಸ್‌ನಲ್ಲಿ 246 ಒಗ್ಗೂಡಿದ್ದು, ಎರಡೂ ತಂಡಗಳು ಸೇರಿ ಪಂದ್ಯದಲ್ಲಿ ಒಟ್ಟು 523 ರನ್ ಕಲೆ ಹಾಕಿದ್ದು ಹೊಸ ದಾಖಲೆ ಸೃಷ್ಟಿಯಾಗಿದೆ.

**ಆರ್‌ಸಿಬಿ ದಾಖಲೆ ಮುರಿದ ಹೈದ್ರಾಬಾದ್**

**ಎಸ್‌ಆರ್‌ಎಚ್ 20 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 277 ರನ್ ಸೇರಿಸಿ, ದಾಖಲೆ ಸೃಷ್ಟಿಸಿದೆ. ಈ ಬೃಹತ್ ಮೊತ್ತ ಕಲೆ ಹಾಕುವ ಮೂಲಕ ಎಸ್‌ಆರ್‌ಎಚ್ ಐಪಿಎಲ್ ಟೂರ್ನಿಯಲ್ಲೆ ಅತ್ಯಧಿಕ ರನ್ ಗಳಿಸಿದ ತಂಡ ಎನ್ನಿಸಿಕೊಂಡಿದೆ. ಈ ಮೂಲಕ ಸನ್ ರೈಸರ್ಸ್ ಹೈದರಾಬಾದ್ ತಂಡ 2013ರಲ್ಲಿ ಆರ್‌ಸಿಬಿ ನಿರ್ಮಿಸಿದ್ದ ದಾಖಲೆಯನ್ನು ಅಳಿಸಿ ಹಾಕಿತು. ಆರ್‌ಸಿಬಿ ಪುಣೆ ವಾರಿಯರ್ಸ್ ವಿರುದ್ಧದ ಪಂದ್ಯದಲ್ಲಿ 263 ರನ್ ಸಿಡಿಸಿದ್ದು, ಈ ವರೆಗಿನ ಗರಿಷ್ಠ ಮೊತ್ತವಾಗಿತ್ತು. ಈ ಮೊತ್ತವನ್ನು ಎಸ್‌ಆರ್ ಎಚ್ ಮೀರಿ ಹೊಸ ದಾಖಲೆ ಬರೆದಿದೆ.**




**ಇಲ್ಲಿವರೆಗಿನ ಗರಿಷ್ಠ ಸ್ಕೋರ್‌ಗಳು**

| ತಂಡ | ಸ್ಕೋರ್ | ಎದುರಾಳಿ | ವರ್ಷ |
|---|---|---|---|
| ಸನ್‌ರೈಸರ್ಸ್ ಹೈದರಾಬಾದ್ | 277/3 | ಮುಂಬಯಿ ಇಂಡಿಯನ್ಸ್ | 2024 |
| ರಾಯಲ್ ಚಾಲೆಂಜರ್ಸ್ ಬೆಂಗಳೂರು | 263/5 | ಪುಣೆ ವಾರಿಯರ್ಸ್ ಇಂಡಿಯಾ | 2013 |
| ಲಖನೌ ಸೂಪರ್ ಜೈಂಟ್ಸ್ | 257/5 | ಪಂಜಾಬ್ ಕಿಂಗ್ಸ್ | 2023 |
| ರಾಯಲ್ ಚಾಲೆಂಜರ್ಸ್ ಬೆಂಗಳೂರು | 248/3 | ಗುಜರಾತ್ ಲಯನ್ಸ್ | 2016 |
| ಚೆನ್ನೈ ಸೂಪರ್ ಕಿಂಗ್ಸ್ | 246/5 | ರಾಜಸ್ಥಾನ್ ರಾಯಲ್ಸ್ | 2010 |

**ಸನ್‌ರೈಸರ್ಸ್ ಹೈದರಾಬಾದ್ 277-3**

| ಬ್ಯಾಟ್ಸ್‌ಮನ್ | ರನ್ | ಬೌಲ್ | ಫೋರ್ | ಸಿಕ್ಸ್ |
|---|---|---|---|---|
| ಮಯಾಂಕ್ ಅಗರ್ವಾಲ್ | 11 | 13 | 1 | 0 |
| ಟ್ರಾವಿಸ್ ಹೆಡ್ | 62 | 24 | 9 | 3 |
| ಅಭಿಶೇಕ್ ಶರ್ಮ | 63 | 23 | 3 | 7 |
| ಮಾರ್ಕರಂ | 42 | 28 | 2 | 1 |
| ಕ್ಲಾಸೇನ್ | 80 | 34 | 4 | 7 |

**ಬೌಲಿಂಗ್**

| ಬೌಲರ್ | ಓವರ್ | ರನ್ | ವಿಕೆಟ್ | ಸರಾಸರಿ |
|---|---|---|---|---|
| ಕ್ವೆನಾ | 4 | 66 | 0 | 16.5 |
| ಹಾರ್ದಿಕ್ | 4 | 46 | 1 | 11.5 |
| ಬುಮ್ರಾ | 4 | 36 | 1 | 9 |
| ಚಾವ್ಲಾ | 3 | 34 | 1 | 17 |
| ಮುಲಾನಿ | 2 | 33 | 0 | 16.5 |

**ಮುಂಬಯಿ ಇಂಡಿಯನ್ಸ್ 277-3**

| ಬ್ಯಾಟ್ಸ್‌ಮನ್ | ರನ್ | ಬೌಲ್ | ಫೋರ್ | ಸಿಕ್ಸ್ |
|---|---|---|---|---|
| ರೋಹಿತ್ | 26 | 12 | 1 | 3 |
| ಕಿಶನ್ | 34 | 13 | 2 | 4 |
| ನಮನ್ | 30 | 14 | 2 | 2 |
| ವರ್ಮಾ | 64 | 34 | 2 | 6 |
| ಪಾಂಡ್ಯಾ | 24 | 20 | 1 | 1 |
| ಡೆವಿಡ್ | 42 | 22 | 2 | 3 |
| ರೊಮಾರಿಯೋ | 15 | 6 | 2 | 1 |

**ಬೌಲಿಂಗ್**

| ಬೌಲರ್ | ವಿಕೆಟ್ | ರನ್ | ವಿಕೆಟ್ | ಸರಾಸರಿ |
|---|---|---|---|---|
| ಭುವನೇಶ್ವರ್ | 4 | 53 | 0 | 13.2 |
| ಜೈದೇವ್ | 4 | 47 | 2 | 11.8 |
| ಶಬಾಜ್ | 3 | 39 | 1 | 13 |
| ಕಮಿನ್ಸ್ | 4 | 35 | 2 | 8.8 |
| ಉಮ್ರಾನ್ | 1 | 15 | 0 | 15 |
| ಮಾರ್ಕಾಂಡೆ | 4 | 52 | 0 | 13 |

## ಸಮಾಚಾರ ಸಣ್ಣದಲ್ಲ

### ಗಿಲ್‌ಗೆ 12 ಲಕ್ಷ ದಂಡ



**ಅಹ್ಮದಾಬಾದ್:** ನಿಧಾನಗತಿಯ ಓವರ್ ಮಾಡಿದಕ್ಕಾಗಿ ಗುಜರಾತ್ ಟೈಟನ್ಸ್ ನಾಯಕ ಶುಭಮನ್ ಗಿಲ್‌ಗೆ 12 ಲಕ್ಷ ತಂಡ ವಿಧಿಸಲಾಗಿದೆ. ಮಂಗಳವಾರ ಚೆನ್ನೈನಲ್ಲಿ ನಡೆದ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಗುಜರಾತ್ ಟೈಟನ್ಸ್ ವಿರುದ್ದದ ಐಪಿಎಲ್ 7ನೇ ಪಂದ್ಯದಲ್ಲಿ ಇದು ಮೊದಲ ಓವರ್ ರೇಟ್ ಅಪರಾಧವಾಗಿರುವುದರಿಂದ ಶುಭಮನ್ ಗಿಲ್ 12 ಲಕ್ಷ ರೂಪಾಯಿ ದಂಡ ಎದುರಿಸಬೇಕಾಗಿದ್ದು, ಎರಡನೇ ಬಾರಿ ನಿಧಾನಗತಿಯ ಓವರ್ ರೇಟ್ ಕಂಡುಬಂದಲ್ಲಿ ನಾಯಕನು ಒಂದು ಪಂದ್ಯದ ನಿಷೇಧವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಲಾಗಿದೆ. ಇದು ಐಪಿಎಲ್ ನೀತಿ ಸಂಹಿತೆಯ ಅಡಿಯಲ್ಲಿ ಈ ಟೂರ್ನಿಯ ಮೊದಲ ಅಪರಾಧವಾಗಿದೆ ಮತ್ತು ಕನಿಷ್ಠ ಮಿತಿಮೀರಿದ ಅಪರಾಧಗಳಿಗೆ ಸಂಬಂಧಿಸಿದಂತೆ 12 ಲಕ್ಷ ರೂಪಾಯಿ ತಂಡವನ್ನು ವಿಧಿಸಲಾಗಿದೆ ಎಂದು ಐಪಿಎಲ್ ಹೇಳಿಕೆ ನೀಡಿದೆ.

### ರೆಡ್ಡಿ ಬಿಜೆಪಿ ಸೇರ್ಪಡೆ ಕಾಯ್ದೆ ಉಲ್ಲಂಘನೆ

**ಬೆಂಗಳೂರು:** ಶಾಸಕ ಜನಾರ್ದನ ರೆಡ್ಡಿಯವರು ಏಕಾಏಕಿ ಬಿಜೆಪಿಗೆ ಸೇರಿ, ಕರ್ನಾಟಕ ಕಲ್ಯಾಣ ರಾಜ್ಯ ಪ್ರಗತಿ ಪಕ್ಷವನ್ನು ಬಿಜೆಪಿ ಜತೆ ವಿಲೀನ ಮಾಡಿರುವುದಾಗಿ ಹೇಳಿರುವುದು ಪಕ್ಷಾಂತರ ನಿಷೇಧ ಕಾಯ್ದೆಯ ಉಲ್ಲಂಘನೆಯಾಗಿದೆ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಜೆಪಿ ಸೇರಿ ತಮ್ಮ ಪಕ್ಷದ ಸದಸ್ಯತ್ವವನ್ನು ತ್ಯಜಿಸಿರುವುದರಿಂದ ಸಂವಿಧಾನದ 10ನೇ ವಿಧಿ ಅನ್ವಯ ರೆಡ್ಡಿ ಅವರ ಸದಸ್ಯತ್ವವನ್ನು ಅಸಿಂಧುಗೊಳಿಸಿ, ಶೋಕಾಸ್ ನೋಟೀಸ್ ಜಾರಿ ಮಾಡುವಂತೆ ಸಭಾಧ್ಯಕ್ಷರಿಗೆ ದೂರು ಸಲ್ಲಿಸಿದ್ದೇವೆ ಎಂದರು. ರೆಡ್ಡಿ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಮೂಲಕ ಬಿಜೆಪಿಯವರು ಭ್ರಷ್ಟಾಚಾರಕ್ಕೆ ಅಧಿಕೃತ ಮುದ್ರೆ ಒತ್ತಿದ್ದಾರೆ ಎಂದು ಆರೋಪಿಸಿದರು.

### ಜೆಡಿಎಸ್-ಬಿಜೆಪಿ ಮೈತ್ರಿ ಮೊದಲೇ ಆಗಬೇಕಿತ್ತು

**ಬೆಂಗಳೂರು:** ವಿಧಾನಸಭೆ ಚುನಾವಣೆಯಲ್ಲಿಯೇ ಜೆಡಿಎಸ್-ಬಿಜೆಪಿ ಮೈತ್ರಿಯಾಗಿದ್ದರೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿರಲಿಲ್ಲ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು. ಜೆಡಿಎಸ್ ಕಚೇರಿಗೆ ಬುಧವಾರ ಭೇಟಿ ನೀಡಿದ ನಂತರ ಅವರು ಮಾತನಾಡಿ, ಆಗ ಎರಡೂ ಪಕ್ಷಗಳ ನಡುವೆ ಮೈತ್ರಿಯಾಗದೇ ರಾಜ್ಯಕ್ಕೆ ಬಹುದೊಡ್ಡ ನಷ್ಟವಾಗಿದೆ. ಕಾಂಗ್ರೆಸ್ ದುರಾಡಳಿತ ಕರ್ನಾಟಕವನ್ನು ಬಾಧಿಸುತ್ತಿದೆ. ಕಳೆದ ಹತ್ತು ತಿಂಗಳಲ್ಲಿ ರಾಜ್ಯ ಆರ್ಥಿಕ ದಿವಾಳಿಯತ್ತ ಸಾಗಿದೆ. ರಸ್ತೆ, ಚರಂಡಿ ರಿಪೇರಿ ಸೇರಿದಂತೆ ಸಣ್ಣಪುಟ್ಟ ಕಾಮಗಾರಿ ನಡೆಸುವುದಕ್ಕೂ ಶಾಸಕರಿಗೆ ಹಣ ನೀಡುತ್ತಿಲ್ಲ. ತಮ್ಮ ಕ್ಷೇತ್ರಗಳಲ್ಲಿ ಮುಖ ತೋರಿಸಲೂ ಅವರಿಗೆ ಆಗುತ್ತಿಲ್ಲ ಎಂದರು.

# ಲಯಕ್ಕೆ ಮರಳುವ ವಿಶ್ವಾಸದಲ್ಲಿ ಡೆಲ್ಲಿ

### ಡೆಲ್ಲಿ, ರಾಜಸ್ಥಾನ ಹಣಾಹಣಿ ಇಂದು | ಭರವಸೆಯಲ್ಲಿ ಸ್ಯಾಮ್ಸನ್ ಪಡೆ



**ಜೈಪುರ:** ಟೂರ್ನಿಯಲ್ಲಿ ಶುಭಾರಂಭ ಕಂಡಿರುವ ರಾಜಸ್ಥಾನ್ ರಾಯಲ್ಸ್ ಹಾಗೂ ಸೋಲಿನೊಂದಿಗೆ ಟೂರ್ನಿ ಆರಂಭಿಸಿದ ಡೆಲ್ಲಿ ಕ್ಯಾಪಿಲ್ಸ್ ಗುರುವಾರದ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ರಿಷಬ್ ಪಂತ್ ಪಡೆ ಗೆಲುವಿನ ಹಳಿಗೆ ಮರಳುವ ಏರುವ ವಿಶ್ವಾಸದಲ್ಲಿದ್ದರೆ, ರಾಜಸ್ಥಾನ ಸತತ 2ನೇ ಗೆಲುವಿನ ಯೋಜನೆ ಹಾಕಿಕೊಂಡಿದೆ. ಕಳೆದ ಟೂರ್ನಿಯಲ್ಲಿ ಕೊನೆಯ ಹಂತದಲ್ಲಿ ನಿರಾಸೆ ಅನುಭವಿಸಿದ್ದ ರಾಜಸ್ಥಾನ ಟೂರ್ನಿ ಆರಂಭದಲ್ಲೇ ಭರ್ಜರಿ ಗೆಲುವು ಸಾಧಿಸಿತ್ತು. ಅದರಂತೆ ಕ್ರಿಕೆಟ್‌ನಿಂದ ದೂರ ಉಳಿದಿದ್ದ ರಿಷಬ್ ಪಂತ್ ಬಂದ ಮೇಲೆ ವಿಶ್ವಾಸ ಹೆಚ್ಚಿಸಿಕೊಂಡಿರುವ ಡೆಲ್ಲಿ ಟೂರ್ನಿಯಲ್ಲಿ ತಮ್ಮ ಖಾತೆ ತೆಗೆಯುವ ಭರವಸೆಯಲ್ಲಿದ್ದಾರೆ.

**ಡೆಲ್ಲಿಗೆ ಬೌಲಿಂಗ್ ಚಿಂತೆ:** ಡೆಲ್ಲಿ ತಂಡದಲ್ಲಿ ವೇಗಿಗಳ ಚಿಂತೆ ಕಾಣತೊಡಗಿದೆ. ಇಶಾಂತ್ ಶರ್ಮ ಮೊದಲ ಪಂದ್ಯದಲ್ಲೇ ಪಾದದ ಗಾಯದಿಂದಾಗಿ ಅರ್ಧಕ್ಕೆ ಪಂದ್ಯ ನಿಲ್ಲಿಸಿ ಹೊರಬಿದ್ದಿದ್ದರು. ರಾಜಸ್ಥಾನ್ ವಿರುದ್ಧದ ಪಂದ್ಯದಲ್ಲಿ ಅವರು ಆಡುವ ಖಚಿತತೆ ಇಲ್ಲ. ಜತೆಗೆ ಅನ್ರಿಚ್ ನೋರ್ಜೆ ಇನ್ನೂ ಫಿಟ್ ಆಗಿಲ್ಲ. ಖಲೀಲ್ ಅಹ್ಮದ್ ತಂಡದಲ್ಲಿದ್ದರೂ ಲಯ ಕಂಡುಕೊಳ್ಳಬೇಕಿದೆ. ಸ್ಪಿನ್ ವಿಭಾಗದಲ್ಲಿ ಅಕ್ಷರ್ ಪಟೇಲ್ ಮತ್ತು ಕುಲ್‌ದೀಪ್ ಯಾದವ್ ಇದ್ದರೂ ಮೊದಲ ಪಂದ್ಯದಲ್ಲಿ ನಿರೀಕ್ಷಿತ ಪ್ರದರ್ಶನ ಬಂದಿಲ್ಲ.

**ಹೆಡ್ ಟು ಹೆಡ್**
27 ಪಂದ್ಯ
ರಾಜಸ್ಥಾನ್ 14 ಡೆಲ್ಲಿ 13

**ಆತ್ಮವಿಶ್ವಾಸದಲ್ಲಿ ರಾಜಸ್ಥಾನ್:** ರಾಜಸ್ಥಾನ್ ತಂಡ ಬಲಿಷ್ಠವಾಗಿದ್ದರೂ ಕಳೆದ ಪಂದ್ಯದಲ್ಲಿ ಆಡಿದ್ದು ನಾಯಕ ಸಂಜು ಸ್ಯಾಮ್ಸನ್ ಮತ್ತು ರಿಯಾನ್ ಪರಾಗ್ ಮಾತ್ರ. ಬೌಲಿಂಗ್‌ನಲ್ಲಿ ಸಂದೀಪ್ ಶರ್ಮ ಉತ್ತಮ ಪ್ರದರ್ಶನ ತೋರಿದ್ದರು. ಯಶಸ್ವಿ ಜೈಸ್ವಾಲ್, ಜಾಸ್ ಬಟ್ಲರ್, ಶಿಮ್ರಾನ್ ಹೆಟ್‌ಮೇರ್ ವಿಫಲರಾಗಿದ್ದರು. ಹೀಗಾಗಿ ಈ ಪಂದ್ಯದಲ್ಲಿ ಇವರೆಲ್ಲ ಫಾರ್ಮ್‌ಗೆ ಮರಳುವ ಅನಿವಾರ್ಯತೆ ಇದೆ.

# ರೋಹಿತ್‌ಗೆ ಜರ್ಸಿ ಗಿಫ್ಟ್ ಕೊಟ್ಟ ಸಚಿನ್

**ಹೈದರಾಬಾದ್:** ಮುಂಬಯಿ ಇಂಡಿಯನ್ಸ್ ತಂಡದ ಮಾಜಿ ನಾಯಕ ರೋಹಿತ್ ಶರ್ಮ ಮುಂಬೈ ಇಂಡಿಯನ್ಸ್ ಪರ 200 ಪಂದ್ಯವನ್ನು ಪೂರ್ತಿಗೊಳಿಸಿದರು. ಈ ಸ್ಮರಣೀಯ ಪಂದ್ಯಕ್ಕೂ ಮುನ್ನ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರು ರೋಹಿತ್‌ಗೆ ವಿಶೇಷ ಜೆರ್ಸಿಯನ್ನು ನೀಡಿ ಗೌರವಿಸಿದರು. ರೋಹಿತ್ ಅವರು ಡೆಕ್ಕನ್ ಚಾರ್ಜಸ್ ವಿರುದ್ಧ ಆಡುವ ಮೂಲಕ ಐಪಿಎಲ್ ಜರ್ನಿ ಆರಂಭಿಸಿದರು. ಇದುವರೆಗೆ ಒಟ್ಟು 245 ಪಂದ್ಯಗಳನ್ನು ಆಡಿದ್ದು ಈ ಪೈಕಿ 200 ಪಂದ್ಯಗಳನ್ನು ಮುಂಬೈ ತಂಡದ ಪರ ಆಡಿದ್ದಾರೆ. ಜತೆಗೆ 5 ಟ್ರೋಫಿಗಳನ್ನು ಕೂಡ ಗೆದ್ದು ಕೊಟ್ಟಿದ್ದಾರೆ. ಒಟ್ಟಾರೆಯಾಗಿ 6 ಐಪಿಎಲ್ ಟ್ರೋಫಿ ಗೆದ್ದ ಸಾಧನೆ ಇವರದ್ದಾಗಿದೆ. ಒಂದು ಟ್ರೋಫಿ ಡೆಕ್ಕನ್ ಪರ ಗಿಲ್ ಕ್ರಿಸ್ಟ್ ನಾಯಕತ್ವದಲ್ಲಿ ಜಯಿಸಿದ್ದರು.




# ಎರಡನೇ ಸುತ್ತು ಪ್ರವೇಶಿಸಿದ ಸಿಂಧು

### ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿ | ಭಾರತಿಯರ ಮೇಲುಗೈ



**ಮ್ಯಾಡ್ರಿಡ್ :** ಇಲ್ಲಿ ನಡೆಯುತ್ತಿರುವ ಮ್ಯಾಡ್ರಿಡ್ ಸ್ಪೇನ್ ಮಾಸ್ಟರ್ಸ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಎರಡನೇ ಸುತ್ತು ಪ್ರವೇಶಿಸಿದರು. ಕಳೆದ ಆವೃತ್ತಿಯಲ್ಲಿ ರನ್ನರ್ ಅಪ್ ಸ್ಥಾನ ಪಡೆದಿದ್ದ ಸಿಂಧು, ಬುಧವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ 21-16, 21-12 ರಿಂದ ಕೆನಡಾದ ವೆನ್ ಯು ಜಾಂಗ್ ಅವರನ್ನು ನೇರ್ ಗೇಮ್‌ಗಳಲ್ಲಿ ಮಣಿಸಿದರು. ಮುಂದಿನ ಸುತ್ತಿನಲ್ಲಿ ಭಾರತದ ಆಟಗಾರ್ತಿಯು ಚೀನಾ ತೈಪೆಯ ಹುವಾಂಗ್ ಯು-ಹ್ಸುನ್ ಅವರನ್ನು ಎದುರಿಸುವರು.

**ಪ್ರಧಾನ ಸುತ್ತು ಪ್ರವೇಶಿಸಿದ ಮಿಥುನ್:**

ಭಾರತದ ಮಿಥುನ್ ಮಂಜುನಾಥ್ ಪುರುಷರ ಸಿಂಗಲ್ಸ್‌ನಲ್ಲಿ ಪ್ರಧಾನ ಸುತ್ತು ಪ್ರವೇಶಿಸಿದರು. ಕ್ವಾಲಿಫೈಯರ್ ಸುತ್ತಿನ ಮೊದಲ ಪಂದ್ಯದಲ್ಲಿ ಅವರು 15-21, 24-22, 21-18ರಿಂದ ಸ್ವದೇಶದ ಎಸ್. ಶಂಕರ್ ಮುತ್ತುಸಾಮಿ ಅವರನ್ನು ಸೋಲಿಸಿದರೆ, ಕನ್ನಡಿಗ ಮಿಥುನ್ ಎರಡನೇ ಸುತ್ತಿನಲ್ಲಿ 21-13, 21-13ರಿಂದ ಚೀನಾ ತೈಪೆಯ ಲಿಯಾವೊ ಜುವೊ ಫು ಅವರನ್ನು ಹಿಮ್ಮೆಟ್ಟಿಸಿ ಮುಖ್ಯ ಸುತ್ತಿಗೆ ಅರ್ಹತೆ ಪಡೆದರು. ಅಲ್ಲಿ 32ರ ಘಟ್ಟದ ಪಂದ್ಯದಲ್ಲಿ ವಾಂಗ್ ತ್ಸು ವೀ ಅವರನ್ನು ಎದುರಿಸುವರು.

**ಡಬಲ್ಸ್‌ನಲ್ಲಿ ಪ್ರೀ ಕ್ವಾರ್ಟರ್ ಫೈನಲ್‌ಗೆ ಭಾರತ**

ಪುರುಷರ ಡಬಲ್ಸ್‌ನಲ್ಲಿ ಭಾರತದ ಕೃಷ್ಣ ಪ್ರಸಾದ್ ಗಾರಗ ಮತ್ತು ಸಾಯಿ ಪ್ರತೀಕ್ ಜೋಡಿ ಆರಂಭಿಕ ಸುತ್ತಿನ ಪಂದ್ಯದಲ್ಲಿ 21-15, 28-30, 21-11ರಿಂದ ಕೆನಡಾದ ಡಾಂಗ್ ಆಯಡಂ ಮತ್ತು ನೈಲ್ ಯಾಕುರಾ ಅವರನ್ನು ರೋಚಕ ಹಣಾಹಣಿಯಲ್ಲಿ ಸೋಲಿಸಿ, ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

# ಧೋನಿ ಬ್ಯಾಟಿಂಗ್‌ಗೆ ಇಂಪ್ಯಾಕ್ಟ್ ಅಡ್ಡಿ

### 8ನೇ ಕ್ರಮಾಂಕಕ್ಕೆ ವಿಸ್ತರಣೆ | ಬ್ಯಾಟಿಂಗ್ ಬರದ ಕಾರಣ ಬಿಚ್ಚಿಟ್ಟ ಹಸ್ಸಿ



**ದೆಹಲಿ:** ಧೋನಿ ಬ್ಯಾಟಿಂಗ್‌ಗೆ ಬರದಿರಲು ಇಂಪ್ಯಾಕ್ಟ್ ಪ್ಲೇಯರ್ ನಿಯಮವೇ ಕಾರಣವೆಂದು ಮೈಕಲ್ ಹಸ್ಸಿ ಹೇಳಿದ್ದಾರೆ. ಸಿಎಸ್‌ಕೆ ತಂಡವನ್ನು ಐದು ಬಾರಿ ಚಾಂಪಿಯನ್ ಮಾಡಿದ್ದ ಅತ್ಯಂತ ಯಶಸ್ವಿ ನಾಯಕ ಎಂಎಸ್ ಧೋನಿ ಈ ಬಾರಿಯ ಐಪಿಎಲ್ ಆರಂಭಕ್ಕೂ ಮುನ್ನ ತಂಡದ ನಾಯಕತ್ವ ತೊರೆದಿದ್ದರು. ಇದರೊಂದಿಗೆ ವೃತ್ತಿಜೀವನದ ಕೊನೆ ಹಂತದಲ್ಲಿರುವ ಸುಳಿವನ್ನು ಧೋನಿ ನೀಡಿದ್ದರು. ಅದಕ್ಕೆ ಪೂರಕವಾಗಿ ಧೋನಿಗೆ ಇದು ಕೊನೆಯ ಐಪಿಎಲ್ ಎಂದು ಅವರ ಆಪ್ತ ಮೂಲಗಳು ಹೇಳುತ್ತಿವೆ. ಹೀಗಾಗಿ ಅವರ ಆಟವನ್ನು ಕೊನೆಯ ಬಾರಿಗೆ ಕಣ್ತುಂಬಿಕೊಳ್ಳಲು ಅಭಿಮಾನಿಗಳು ಕಾಯುತ್ತಿದ್ದಾರೆ. ಆದರೆ ಆಡಿದ ಎರಡೂ ಪಂದ್ಯಗಳಲ್ಲೂ ಧೋನಿ ಬ್ಯಾಟಿಂಗ್‌ಗೆ ಬರಲಿಲ್ಲ. ಇದೀಗ ಅದರ ಕಾರಣ ಹಸ್ಸಿ ಹೇಳಿದ್ದಾರೆ.

**ಇಂಪ್ಯಾಕ್ಟ್ ನಿಯಮದ ಪರಿಣಾಮ**

ಈ ಇಂಪ್ಯಾಕ್ಟ್ ಪ್ಲೇಯರ್ ನಿಯಮ ತಂಡದ ಬ್ಯಾಟಿಂಗ್ ಕ್ರಮಾಂಕವನ್ನು ಹೆಚ್ಚಿಸಿದೆ. ಇದು ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿಯ ಬ್ಯಾಟಿಂಗ್ ಕ್ರಮಾಂಕ ಕುಸಿಯುವಂತೆ ಮಾಡಿದೆ. ಮುಖ್ಯ ಕೋಚ್ ಸ್ಟೀಫನ್ ಫ್ಲೆಮಿಂಗ್ ಅವರ ಸೂಚನೆಗಳು ಪಂದ್ಯವನ್ನು ಮುಂದಕ್ಕೆ ಕೊಂಡೊಯ್ಯುತ್ತವೆ. ಇಂಪ್ಯಾಕ್ಟ್ ಪ್ಲೇಯರ್ ನಿಯಮದಿಂದಾಗಿ ಧೋನಿಯ ಬ್ಯಾಟಿಂಗ್ ಕ್ರಮಾಂಕವನ್ನು ಎಂಟನೇ ಸ್ಥಾನಕ್ಕೆ ವಿಸ್ತರಿಸಿದೆ. ಧೋನಿ ಕೂಡ ನೆಟ್ಸ್‌ನಲ್ಲಿ ಉತ್ತಮವಾಗಿ ಬ್ಯಾಟಿಂಗ್ ಮಾಡುತ್ತಿದ್ದಾರೆ ಎಂದು ಹಸ್ಸಿ ಹೇಳಿದ್ದಾರೆ.

# ನಾಲ್ಕು ರಾಜ್ಯಗಳ ತಲಾ ಆದಾಯ ಹೆಚ್ಚಳ

**ದೆಹಲಿ:** ಕಳೆದ ಒಂದು ದಶಕದಲ್ಲಿ ಗುಜರಾತ್, ಕರ್ನಾಟಕ, ತೆಲಂಗಾಣ ಹಾಗೂ ತಮಿಳುನಾಡು ರಾಜ್ಯದ ತಲಾ ಆದಾಯವು ಹೆಚ್ಚಳವಾಗಿದೆ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸಂಶೋಧನಾ ವರದಿ ಹೇಳಿದೆ.

ಈ ರಾಜ್ಯಗಳಿಗೆ ಹೋಲಿಸಿದರೆ ಪಶ್ಚಿಮ ಬಂಗಾಳ, ಬಿಹಾರ ಹಾಗೂ ಜಾರ್ಖಂಡ್ ರಾಜ್ಯದ ತಲಾ ಆದಾಯವು ನಿರೀಕ್ಷಿತ ಮಟ್ಟದಲ್ಲಿ ಏರಿಕೆಯಾಗಿಲ್ಲ. ದೇಶದ ಪಶ್ಚಿಮ ಹಾಗೂ ದಕ್ಷಿಣ ಭಾಗದಲ್ಲಿರುವ ರಾಜ್ಯಗಳಿಗೆ ಹೋಲಿಸಿದರೆ ಪೂರ್ವ ಹಾಗೂ ಉತ್ತರ ಭಾಗದಲ್ಲಿರುವ ರಾಜ್ಯಗಳ ತಲಾ ಆದಾಯದಲ್ಲಿ ಏರಿಕೆಯಾಗಿಲ್ಲ. ಇದರಿಂದ ರಾಜ್ಯಗಳ ನಡುವೆ ಅಸಮಾನತೆಯ ಬಿರುಕು ದೊಡ್ಡದಾಗುತ್ತಿದೆ ಎಂದು ಹೇಳಿದೆ.

2011-12ರಲ್ಲಿ ಗುಜರಾತ್‌ನ ತಲಾ ಆದಾಯವು ರಾಷ್ಟ್ರೀಯ ಸರಾಸರಿಗೆ ಹೋಲಿಸಿದರೆ 1.4 ಪಟ್ಟು ಹೆಚ್ಚು ಇತ್ತು. 2022-23ರಲ್ಲಿ 1.8 ಪಟ್ಟಿನಷ್ಟು ಇದೆ. ಕರ್ನಾಟಕದ ತಲಾ ಆದಾಯವು 1.7 ಪಟ್ಟು ಹಾಗೂ ತೆಲಂಗಾಣದ ತಲಾ ಆದಾಯವು 1.6 ಪಟ್ಟಿನಷ್ಟು ಇದೆ. ಆದರೆ ಪಶ್ಚಿಮ ಬಂಗಾಳ, ರಾಜಸ್ಥಾನ, ಬಿಹಾರದ ತಲಾ ಆದಾಯವು ಇಳಿಕೆಯಾಗಿದ್ದು, ರಾಷ್ಟ್ರೀಯ ಸರಾಸರಿಗಿಂತಲೂ ಕಡಿಮೆ ಇದೆ ಎಂದು ತಿಳಿಸಿದೆ.




2022-23ರಲ್ಲಿ ದೇಶದ ತಲಾ ಆದಾಯವು ₹1,16,226 ಇದೆ. ಸದ್ಯ ಗುಜರಾತ್‌ನ ತಲಾ ಆದಾಯವು ₹2,09,188 ಇದ್ದರೆ, ಬಿಹಾರದ ತಲಾ ಆದಾಯವು ₹34,864 ಇದೆ ಎಂದು ವರದಿ ವಿವರಿಸಿದೆ.

# ಡ್ರಗ್ಸ್ ಜಪ್ತಿ ಕೇಸ್: ಸಂಜೀವ್ ಭಟ್ ದೋಷಿ

### 1996ರ ಪ್ರಕರಣದಲ್ಲಿ ಆರೋಪಿಯಾಗಿದ್ದ ಮಾಜಿ ಐಪಿಎಸ್ ಅಧಿಕಾರಿ

### ಗುಜರಾತ್‌ನ ಪಾಲಂಪುರ ಟೌನ್‌ನ ಸೆಷನ್ಸ್ ಕೋರ್ಟ್‌ನಿಂದ ತೀರ್ಪು



**ಅಹ್ಮದಾಬಾದ್:** 1996ರಲ್ಲಿ ಡ್ರಗ್ಸ್ ಜಪ್ತಿ ಕೇಸ್‌ನಲ್ಲಿ ಮಾಜಿ ಐಪಿಎಸ್ ಅಧಿಕಾರಿ ಸಂಜೀವ್ ಭಟ್ ದೋಷಿ ಎಂದು ಗುಜರಾತ್‌ನ ಸ್ಥಳೀಯ ಕೋರ್ಟ್ ತೀರ್ಪು ನೀಡಿದೆ.

ಬನಸ್ಕಾಂತ ಜಿಲ್ಲೆಯ ಪಾಲಂಪುರ ಟೌನ್‌ನ ಸೆಷನ್ಸ್ ಕೋರ್ಟ್ ಈ ತೀರ್ಪು ಪ್ರಕಟಿಸಿದ್ದು, ಶಿಕ್ಷೆಯ ಪ್ರಮಾಣ ಗುರುವಾರ ಮಧ್ಯಾಹ್ನ ಪ್ರಕಟವಾಗಲಿದೆ. 1996ರಲ್ಲಿ ವಕೀಲರು ತಂಗಿದ್ದ ಪಾಲನ್‌ಪುರದ ಹೋಟೆಲ್ ಕೊಠಡಿಯಿಂದ ಪೊಲೀಸರು ಡ್ರಗ್ಸ್ ವಶಪಡಿಸಿಕೊಂಡಿದ್ದರು ಎಂದು ಸಂಜೀವ್ ಭಟ್ ಹೇಳಿದ್ದರು. ಈ ಮೂಲಕ ರಾಜಸ್ಥಾನ ಮೂಲದ ವಕೀಲರನ್ನು ತಪ್ಪಾಗಿ ಸಿಲುಕಿಸಿದ ಆರೋಪದ ಮೇಲೆ ಕೋರ್ಟ್ ಭಟ್ ತಪ್ಪಿತಸ್ಥರೆಂದು ಪರಿಗಣಿಸಿದೆ.

2015ರಲ್ಲಿ ಸಂಜೀವ್ ಭಟ್ ಅವರನ್ನು ಐಪಿಎಸ್‌ನಿಂದ ವಜಾಗೊಳಿಸಲಾಗಿತ್ತು. ಇದಕ್ಕೂ ಮುನ್ನ ಸಂಜೀವ್ ಭಟ್ ಬನಸ್ಕಾಂತ ಜಿಲ್ಲೆಯ ಎಸ್‌ಪಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವರ ನೇತೃತ್ವದಲ್ಲಿ ಜಿಲ್ಲಾ ಪೊಲೀಸರು ರಾಜಸ್ಥಾನದ ವಕೀಲ ಸುಮೇರ್‌ಸಿಂಗ್ ರಾಜಪುರೋಹಿತ್ ಅವರನ್ನು 1996ರಲ್ಲಿ ನಾರ್ಕೋಟಿಕ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ ಸಬ್‌ಸ್ಟಾನ್ಸ್ ಕಾಯ್ದೆ (ಎನ್‌ಡಿಪಿಎಸ್ ಆಕ್ಟ್) ಸಂಬಂಧಿತ ಸೆಕ್ಷನ್‌ಗಳ ಅಡಿಯಲ್ಲಿ ಬಂಧಿಸಿದ್ದರು. ವಕೀಲರು ತಂಗಿದ್ದ ಪಾಲನ್‌ಪುರದ ಹೋಟೆಲ್ ಕೊಠಡಿಯಿಂದ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ ಎಂದು ಆರೋಪಿಸಿದ್ದರು.

# ಏ.3ಕ್ಕೆ ರಾಹುಲ್ ನಾಮಪತ್ರ?

### ವಯನಾಡ್‌ಗೆ ಆಗಮಿಸಲಿರುವ ಕೈ ನಾಯಕ



**ದೆಹಲಿ:** ಕಾಂಗ್ರೆಸ್ ನಾಯಕ, ವಯನಾಡ್ ಸಂಸದ ರಾಹುಲ್ ಗಾಂಧಿಯವರು ಏ.3ರಂದು ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ ಎಂದು ಮೂಲಗಳು ಹೇಳಿವೆ. ಅಂದು ಅವರು ವಯನಾಡಿಗೆ ಆಗಮಿಸಲಿದ್ದು, ಪ್ರಚಾರಕ್ಕೂ ಚಾಲನೆ ನೀಡಲಿದ್ದಾರೆ. ಜತೆಗೆ, ಅಂದೇ ಡೀಸಿ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ ಎಂದು ಪಕ್ಷದ ಮೂಲಗಳು ಹೇಳಿವೆ.

ಸದ್ಯ ಈ ಕ್ಷೇತ್ರದಲ್ಲಿ ರಾಹುಲ್ ಹಾಲಿ ಸಂಸದ. ಎರಡನೇ ಬಾರಿಗೆ ಇಲ್ಲಿಂದ ಅವರು ಸ್ಪರ್ಧೆ ಮಾಡುತ್ತಿದ್ದಾರೆ. ಆದರೆ, ಈ ಬಾರಿ ಸಿಪಿಐನಿಂದ ಡಿ.ರಾಜಾ ಪತ್ನಿ ಅನ್ನೀ ರಾಜಾ ಮತ್ತು ಬಿಜೆಪಿಯಿಂದ ಕೆ. ಸುರೇಂದ್ರನ್ ಸ್ಪರ್ಧೆ ಮಾಡುತ್ತಿದ್ದಾರೆ. ಹೀಗಾಗಿ, ಬಲವಾದ ಸ್ಪರ್ಧೆ ಏರ್ಪಡಬಹುದು ಎಂದು ಹೇಳಲಾಗುತ್ತಿದೆ. ಈ ಕ್ಷೇತ್ರಕ್ಕೆ ಏ.26ರಂದು ಚುನಾವಣೆ ನಡೆಯಲಿದೆ.